# ಸುಷ್ಮಿತಾ ಶೈನಿಂಗ್!

ಸುಷ್ಮಿತಾ ಸೇನ್ ಅಭಿನಯ ಕ್ಷೇತ್ರಕ್ಕೆ ಮರಳಿದ್ದಾಳೆ. ಆಕೆ ಅಭಿನಯಿಸಿರುವ ವೆಬ್ ಸರಣಿ 'ಆರ್ಯ'ದ ಟ್ರೇಲರ್ ಬಿಡುಗಡೆಯಾಗಿದೆ. 45ರ ವಯಸ್ಸಿನಲ್ಲೂ ಹದಿಹರೆಯದ ಸುಂದರಿಯಂತೆ ಮಿಂಚುತ್ತಿರುವ ಸುಷ್ಮಿತಾ, ಕೊರೊನಾ ರಜೆಯಲ್ಲಿ ಕಠಿಣ ವರ್ಕೌಟ್ ಮಾಡಿ ದೇಹ ದಂಡಿಸಿದ್ದಾಳಂತೆ. ಅದೂ ಜೊತೆಗಾರ ರೋಹ್ಮನ್ ಶಾವ್ಲ್ ಜೊತೆಗೆ. ಆಕೆ ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿರುವ ಇಬ್ಬರ ಜಂಟಿ ವ್ಯಾಯಾಮದ ಫೋಟೊಗಳನ್ನು ನೋಡಿದವರು 'ಪರವಾಗಿಲ್ಲ, ಇಬ್ಬರೂ ಅನ್ಯೋನ್ಯವಾಗಿದ್ದಾರೆ' ಎಂದು ನಿಟ್ಟುಸಿರು ಬಿಟ್ಟಂತಿದೆ! 45ರ ಸುಂದರಿ ಸುಷ್ಮಿತಾಗೆ 29ರ ರೋಹ್ಮನ್ ಹೇಗೆ ಜೋಡಿಯಾಗಬಲ್ಲ ಎನ್ನುವ ಸಂಶಯ ಕಾಡುತ್ತಿದ್ದವರೂ ಈಗ ನೆಮ್ಮದಿಯಿಂದ ಇದ್ದಾರಂತೆ.

ಸುಷ್ಮಿತಾ 24ರ ಹರೆಯದಲ್ಲೇ ಹೆಣ್ಣುಮಗುವೊಂದನ್ನು ದತ್ತು ಪಡೆದವಳಾಕೆ. 'ಏನೋ ಸಮಾಜ ಉದ್ಧಾರ ಮಾಡುತ್ತೇನೆಂಬ ಧೋರಣೆಯಿಂದ ಅಲ್ಲ; ನನ್ನ ಬದುಕಿಗೆ ಒಂದು ಅರ್ಥ ಸಿಗಲೆಂದು ದತ್ತು ಪಡೆದಿದ್ದೇನೆ' ಎಂದು ಹೇಳಿದ್ದಳಾಕೆ. 2000 ಇಸವಿಯಲ್ಲಿ ಹೀಗೆ ದತ್ತು ಪಡೆದ ಮುದ್ದು ಮಗಳು ರಿನೀಗೆ 20 ವರ್ಷ. ಸುಷ್ಮಿತಾ ಎಷ್ಟು ನೇರವಂತಳೆಂದರೆ, ಮಗಳ 16ನೇ ವಯಸ್ಸಿನಲ್ಲಿ 'ನಿನ್ನ ನಿಜವಾದ ತಂದೆ ತಾಯಿ ಯಾರೆಂದು ನಿನಗೆ 18ನೇ ವಯಸ್ಸಿನಲ್ಲಿ ಹೇಳುತ್ತೇನೆ' ಎಂದಿದ್ದಳು. ಅದರಂತೆ ಮಗಳಿಗೆ 18 ತುಂಬಿದಾಗ ಲಕೋಟೆಯಲ್ಲಿ ಹೆತ್ತವರ ವಿವರಗಳನ್ನು ಬರೆದು ಕೊಟ್ಟಳಂತೆ. ಮಗಳು ಸಿಟ್ಟಿನಿಂದ 'ನಿನಗೆ ಮಾಡಲು ಬೇರೆ ಕೆಲಸ ಇಲ್ವಾ? ಹೆತ್ತವರ ಬಗ್ಗೆ ತಿಳಿದುಕೊಳ್ಳಲು ನನಗೆ ಆಸಕ್ತಿಯಿಲ್ಲ' ಎಂದು ಬೈದಳಂತೆ!

2010ರಲ್ಲಿ ಇನ್ನೊಂದು ಹೆಣ್ಣಮಗುವನ್ನು ದತ್ತು ತೆಗೆದುಕೊಂಡ ಸುಷ್ಮಿತಾ ಇಬ್ಬರು ಮಕ್ಕಳ ಜೊತೆಗೆ ಸಂತೋಷವಾಗಿದ್ದಾಳೆ. ಹತ್ತರ ಎಳೆಯ ಆಕೆಯ ಹೆಸರು ಅಲಿಸಾ. ವೆಬ್ ಸರಣಿಗೆ ಈಗ ದೊಡ್ಡ ಮಟ್ಟದಲ್ಲಿ ಪ್ರೇಕ್ಷಕರಿದ್ದಾರೆ ಎನ್ನುವುದನ್ನು ಖುಷಿಯಿಂದ ಹೇಳುವ ಸುಷ್ಮಿತಾ, 'ಅಭಿನಯ ಬಿಡುವುದು ಕಷ್ಟ. ನೀವು ನೆನಪಿಸಿಕೊಂಡಿದ್ದೀರಿ, ಅದಕ್ಕೇ ಮತ್ತೆ ಬಂದಿದ್ದೇನೆ' ಎಂದು ಮುಗುಳ್ನಗೆ ಬೀರಿದ್ದಾಳೆ. ■









# ಹೀರೊಯಿನ್‌ಗಳ ದ್ವಂದ್ವ

ಹಠಾತ್ ಲಾಕ್‌ಡೌನ್‌ನಿಂದ ಬೀದಿಗೆ ಬಿದ್ದ ಲಕ್ಷಾಂತರ ವಲಸೆ ಕಾರ್ಮಿಕರ ನೆರವಿಗೆ ಕೆಲವು ಬಾಲಿವುಡ್ ತಾರೆಯರು ಧಾವಿಸಿದ್ದಾರೆ. ಇವರಲ್ಲಿ ಮುಂಚೂಣಿಯಲ್ಲಿ ನಿಂತು ಸುದ್ದಿ ಮಾಡಿದಾತ ಖಳನಟ ಸೋನು ಸೂದ್. ಆತನೀಗ ಬಾಲಿವುಡ್‌ನಲ್ಲಿ ಸೂಪರ್‌ಹೀರೊ. ಆದರೆ ಬಾಲಿವುಡ್‌ನ ಬಹುತೇಕ ಹೀರೊಯಿನ್‌ಗಳ ವಲಸೆ ಕಾರ್ಮಿಕರ ಸಂಕಟದ ಕುರಿತು ಮಾತನಾಡಿದ್ದು ಎಲ್ಲೂ ಕಂಡುಬರಲಿಲ್ಲ.

ಈಗ ಅಮೆರಿಕದಲ್ಲಿ ಜಾರ್ಜ್ ಫ್ಲಾಯ್ಡ್ ಎನ್ನುವ ಕರಿಯನೊಬ್ಬನನ್ನು ಬಿಳಿಯ ಪೊಲೀಸ್ ದಾರುಣವಾಗಿ ಹತ್ಯೆಗೈದ ಸುದ್ದಿಗೆ ಬಾಲಿವುಡ್‌ನ ಹಲವು ಹೀರೊಯಿನ್‌ಗಳು ಪ್ರತಿಭಟನೆಯ ಧ್ವನಿ ಎತ್ತಿದ್ದಾರೆ. ಪ್ರಿಯಾಂಕಾ ಚೋಪ್ರಾ ಮತ್ತು ಕರೀನಾ ಕಪೂರ್ ಅವರಲ್ಲಿ ಪ್ರಮುಖರು. ಕಪ್ಪುವರ್ಣೀಯರ ಪರ ಈ ಇಬ್ಬರು ನಾಯಕಿಯರು ಸಾಮಾಜಿಕ ಜಾಲತಾಣದಲ್ಲಿ ಗಟ್ಟಿಧ್ವನಿ ಎತ್ತಿರುವುದು ಎದ್ದು ಕಾಣುತ್ತಿದೆ.

ಆದರೆ ಈ ಗಟ್ಟಿಧ್ವನಿಯೇ ಇವರಿಬ್ಬರ ಟ್ರೋಲ್‌ಗೆ ಕಾರಣವಾಗಿರುವುದು ವಿಶೇಷ. 'ದೂರದ ಅಮೆರಿಕದಲ್ಲಿ ನಡೆಯುವ ಅನ್ಯಾಯದ ಬಗ್ಗೆ ಧ್ವನಿ ಎತ್ತುವ ಈ ಹೀರೊಯಿನ್‌ಗಳು ಇಲ್ಲಿ ಲಕ್ಷಾಂತರ ವಲಸೆ ಕಾರ್ಮಿಕರು ಬೀದಿಗೆ ಬಿದ್ದು ಸಾಯುವಾಗ ಎಲ್ಲಿದ್ದರು?' ಎನ್ನುವುದು ಟ್ರೋಲಿಗರ ಪ್ರಶ್ನೆ. ನಟ ಅಜಯ್ ದೇವಗನ್ ಕೂಡಾ ಈ ಆಕ್ಷೇಪಕ್ಕೆ ದನಿಗೂಡಿಸಿದ್ದಾನೆ. 'ನಮ್ಮ ಕಾರ್ಮಿಕರು ಬೀದಿಗೆ ಬಿದ್ದಾಗ ಗಪ್‌ಚುಪ್ ಆಗಿ ಕುಳಿತವರು ಈಗ ಅಮೆರಿಕದ ಅನ್ಯಾಯವನ್ನು ಖಂಡಿಸುತ್ತಿದ್ದಾರೆ. ಮೊದಲು ಕಾಲಬುಡದಲ್ಲಿ ನೋಡಿ' ಎಂದು ಆತ ಬುದ್ಧಿ ಹೇಳಿರುವುದು ದೊಡ್ಡ ಸುದ್ದಿಯಾಗಿದೆ.

■ ಬಿಂದು